ಇ) 2009–10ರಲ್ಲಿ ಸೇಡಂ ಪಟ್ಟಣಕ್ಕೆ ನಿಗದಿ ಮಾಡಿರುವ ಅನುದಾನವೆಷ್ಟು (ವಿವರ ನೀಡುವುದು);

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು) :

ಅ) ಸೇಡಂ ಪಟ್ಟಣದ ಅಭಿವೃದ್ಧಿಗೆ ಈ ಕೆಳಗಿನಂತೆ ಅನುದಾನ ಬಿಡುಗಡೆಗೊಳಿಸಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ	ಅನುದಾನ	ಬಿಡುಗಡೆಯಾದ ಮೊತ್ತ		
		2006–07	2007–08	2008–09
1	ಎಸ್ಎಫ್ಸಿ (ಮುಕ್ತನಿಧಿ)	123.60	220.27	171.81
2	ಎಸ್ಎಫ್ಸಿ(ವಿಶೇಷ)	–	–	25.00
3	ಎಸ್ಎಫ್ಸಿ (ಪ್ರೋತ್ಸಾಹ ಧನ)	–	34.99	–
4	12ನೇ ಹಣಕಾಸು	16.49	44.42	56.86

ಇ) 2009–10ನೇ ಸಾಲಿಗೆ ಸೇಡಂ ಪಟ್ಟಣಕ್ಕೆ ಎಸ್.ಎಫ್.ಸಿ. ಮುಕ್ತನಿಧಿಯಡಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ.265.21 ಲಕ್ಷ ನಿಗಧಿಪಡಿಸಿದೆ.

765 ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09ನೇ ಸಾಲಿನ ಯೋಜನಾ ರೂಪರೇಶೆ (Plan outlay) ಎಷ್ಟಿತ್ತು;

ಆ) ಅದರಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ;

ಇ) ಮಾರ್ಚ್ 31ರವರೆಗೆ ಖರ್ಚಾದ ಹಣವೆಷ್ಟು; (ವಿವರ ನೀಡುವುದು)?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) 2008–09ನೇ ಸಾಲಿನ ಆಯವ್ಯದಂತೆ ರಾಜ್ಯ ಯೋಜನಾ ಗಾತ್ರ 25953 ಕೋಟಿ ರೂ.ಗಳು. ಪರಿಷ್ಕೃತ ಅಂದಾಜಿನಂತೆ ರಾಜ್ಯ ಯೋಜನಾ ಗಾತ್ರವು 22118 ಕೋಟಿ ರೂ.ಗಳು.

ಆ) ಪರಿಷ್ಕೃತ ಅಂದಾಜಿನಂತೆ ಅಗತ್ಯ ಅನುದಾನವನ್ನು ಒದಗಿಸಲಾಗಿದೆ.

ಇ) ಮಹಾಲೇಖಪಾಲರು ಸವಿವರ ಯೋಜನಾವಾರು ಲೆಕ್ಕವನ್ನು ಇನ್ನೂ ಒದಗಿಸಬೇಕಾಗಿದೆ. ತಾತ್ಕಾಲಿಕ ಲೆಕ್ಕದಂತೆ, 2008–09ನೇ ಸಾಲಿನ ರಾಜ್ಯ ಯೋಜನಾ ವೆಚ್ಚವು 21401 ಕೋಟಿ ರೂ.ಗಳು.

1110 ಶ್ರೀ ಅಪ್ಪಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ ಪೊಲೀಸ್ ಠಾಣೆ ಮಂಜೂರು ಮಾಡುವಾಗ ಸರ್ಕಾರ ಅನುಸರಿಸುವ ಮಾನದಂಡಗಳು ಯಾವುವು?

ಆ) ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಬಿಜಾಪುರ ನಗರದಲ್ಲಿ ದಿನೇ ದಿನೇ ಜನಸಂಖ್ಯೆ ಹೆಚ್ಚಾಗುತ್ತಿದ್ದು, ನಗರವು ತನ್ನ ವ್ಯಾಪ್ತಿಯನ್ನು ವಿಸ್ತಾರ ಹೊಂದುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ ಬಿಜಾಪುರ ನಗರದ ಜಲನಗರದಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಉ) ಹಾಗಿದ್ದಲ್ಲಿ, ಜಲನಗರದಲ್ಲಿ ಪೊಲೀಸ್ ಠಾಣೆಯನ್ನು ಎಂದಿನಿಂದ ಮಂಜೂರು ಮಾಡಲಾಗುವುದು; ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ: ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿ ಪ್ರಕಾರ ಒಂದು ಹೊಸ ಪೊಲೀಸ್ ಠಾಣೆ ಸೃಜನೆ ಹಾಗೂ ಪೊಲೀಸ್ ಉಪಠಾಣೆಗಳನ್ನು ಮೇಲ್ದರ್ಜೆಗೇರಿಸಬೇಕಾದಲ್ಲಿ ಈ ಕೆಳಗಿನ ಮಾನದಂಡಗಳನ್ನು ನಿಗಧಿಪಡಿಸಿದೆ.

ವ್ಯಾಪ್ತಿ	–	150 ಚ.ಕಿ.ಮಿ
ಜನಸಂಖ್ಯೆ ದಟ್ಟಣೆ	–	60,000
ಅಪರಾಧಗಳು	–	ವಾರ್ಷಿಕ 600 ಪ್ರಕರಣಗಳು

As per National Police Commission for creation of a new Police Station and up-gradation of police outpost the criteria are as follows :